# ಕಾರಂತರ ಸನಿಹದಲ್ಲೇ ಕುಳಿತ ಪುಳಕ!

■ ಚಿತ್ರ-ಬರಹ: ಸದಾನಂದ ಹೆಗಡೆಕಟ್ಟೆ, ಮೂಡುಬಿದರೆ



ಚಿತ್ರದಲ್ಲಿ ಕಾರಂತರ ಜತೆಗೆ ಕುಳಿತವರು ಲೇಖಕ ಸದಾನಂದ ಹೆಗಡೆಕಟ್ಟೆ (ಎಡದಿಂದ ನಾಲ್ಕನೆಯವರು)

ಹಿರಿಯ ಸಾಹಿತಿಗಳ ಪಕ್ಕದಲ್ಲಿ ನಿಲ್ಲುವುದು, ಕುಳಿತು ಕೊಳ್ಳುವುದು ಬಿಡಿ, ಎದುರು ನಿಂತುಕೊಳ್ಳುವುದು ಕೂಡ ಜನಸಾಮಾನ್ಯರಿಗೆ ಪುಳಕದ ಸಂಗತಿ. ಕಡಲತೀರದ ಭಾರ್ಗವ ಡಾ.ಕೋಟ ಶಿವರಾಮ ಕಾರಂತರ ವ್ಯಕ್ತಿತ್ವ ಶಿಖರದಷ್ಟು ಎತ್ತರ. ಆದರೆ ಅವರು ಅಷ್ಟೇ ಸರಳ ವ್ಯಕ್ತಿ. ಮಾತು ನೇರ, ನಡೆನುಡಿಯಲ್ಲಿ ಕಟ್ಟುನಿಟ್ಟು. ಶಿಸ್ತಿನ ಸಿಪಾಯಿ.

ಅವರೊಂದಿಗೆ ಕಳೆದ ಕೆಲ ಕ್ಷಣ ನನ್ನ ಸುದೈವ ಎಂದೇ ಹೇಳಬೇಕು. ಸುಮಾರು 24 ವರ್ಷ ಹಿಂದಿನ ಘಟನೆ ಇದು. ಒಂದು ಕಾರ್ಯಕ್ರಮದಲ್ಲಿ ಅವರೊಂದಿಗೆ, ಅದೂ ಅವರ ಪಕ್ಕದಲ್ಲೇ ಕುಳಿತುಕೊಳ್ಳುವ ಸುಯೋಗ ನನ್ನದಾಗಿತ್ತು. ಆ ಕ್ಷಣ ಇಂದಿಗೂ ಪುಳಕ, ರೋಮಾಂಚನ ತರುತ್ತದೆ.

ಈಚೆಗೆ ಒಂದು ದಿನದ ಆಲ್ಬಂ ನೋಡುತ್ತಿರುವಾಗ ಸುಮಾರು 24 ವರ್ಷಗಳ ಹಿಂದಿನ ಈ ಫೋಟೊ ಸಿಕ್ಕಿತು. ಇದನ್ನು ನೋಡಿದಾಗ ನಾನು ಕಡಲ ತೀರದ ಭಾರ್ಗವ, ಪ್ರಖ್ಯಾತ ಸಾಹಿತಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಶಿವರಾಮ ಕಾರಂತರ ಪಕ್ಕದಲ್ಲಿ ವರದಿಗಾರನ (ಪ್ರಜಾವಾಣಿ) ಗುರುತು ಕಾರ್ಡಿನೊಂದಿಗೆ ಕುಳಿತುಕೊಂಡಿವುದನ್ನು ಕಂಡೆ.

ಅಂದು ನಾನು ವರದಿ ಮಾಡಲು ಮೂಡುಬಿದರೆಯ ಸೋನ್ಸ್ ಫಾರ್ಮ್‌ನಲ್ಲಿ ಏರ್ಪಡಿಸಲಾದ ಇಲ್ಲಿನ ರೋಟರಿ ಕ್ಲಬ್‌ನ ಭೂಗ್ರಹ ರಕ್ಷಣೆ ಕಾರ್ಯಕ್ರಮಕ್ಕೆ ಅರ್ಧ ಗಂಟೆ ಮುಂಚೆ ಹೋಗಿದ್ದೆ. ನನಗಿಂತ ಮೊದಲು ಕಾರಂತರು ಅಲ್ಲಿಗೆ ಬಂದಿದ್ದರು. ಅವರಿಗೆ ನನ್ನ ಹೆಸರು, ನಾನು ವರದಿ ಮಾಡಲಿರುವ ಪತ್ರಿಕೆಯ ಹೆಸರು ಹೇಳಿದ ಬಳಿಕ ಅವರ ಪಕ್ಕದಲ್ಲಿ ಖಾಲಿ ಇರುವ ಆಸನದಲ್ಲಿ ಕುಳಿತುಕೊಳ್ಳುವಂತೆ ಹೇಳಿದರು. ಅವರ ಆದೇಶದಂತೆ ಅವರ ಪಕ್ಕದಲ್ಲೇ ಕುಳಿತುಕೊಂಡೆ. ಬಹಳ ಆತ್ಮೀಯವಾಗಿ ಮಾತನಾಡಿದರು.

ಭೂಗ್ರಹ ರಕ್ಷಣೆ ಕಾರ್ಯಕ್ರಮ ನಡೆಯಲಿರುವ ಸೋನ್ಸ್ ಫಾರ್ಮ್ ಅತ್ಯಂತ ಸುವ್ಯಸ್ಥಿತವಾಗಿರುವ ಒಂದು ಗಿಡಮರಗಳ ಪ್ರದೇಶ. ಸುಮಾರು 65–70 ಎಕರೆ ಪ್ರದೇಶದಲ್ಲಿರುವ ಮೂಡುಬಿದರೆಯಿಂದ 5. ಕಿ.ಮೀ. ದೂರದಲ್ಲಿ ಕಾರ್ಕಳ ರಸ್ತೆಯಲ್ಲಿರುವ ಸೋನ್ಸ್ ಫಾರ್ಮ್ ರಾಜ್ಯದ ಒಂದು ಪ್ರಮುಖ ಫಾರ್ಮ್. ಅನಾನಸ್ ಹಣ್ಣಿಗಾಗಿ ಪ್ರಸಿದ್ಧವಾದ ಸೋನ್ಸ್ ಫಾರ್ಮಿನಲ್ಲಿ ಸುಮಾರು 84 ಬಗೆಯ ಬೆಳೆಯನ್ನು ಹಾಗೂ ದೇಶ, ವಿದೇಶಗಳ ಹಣ್ಣುಗಳನ್ನು ಬೆಳೆಯಲಾಗುತ್ತದೆ. ಫಾರ್ಮಿನ ಮಾಲೀಕರು ಡಾ. ಎಲ್.ಸಿ. ಸೋನ್ಸ್ ಅಮೆರಿಕೆಯ ಮೊಂಟೆಸಾ ವಿ.ವಿ.ಯ ಪಿ.ಎಚ್.ಡಿ. ಪಡೆದ ಕೃಷಿ ಕಾರ್ಯ ಹಾಗೂ ಸಂಶೋಧನೆಯಲ್ಲಿ ನಿರತರಾದವರು. ಇಲ್ಲಿ 15ಕ್ಕೂ ಅಧಿಕ ಪ್ರಭೇಧದ ಬಿದಿರನ್ನು ಬೆಳೆಯಲಾಗುತ್ತದೆ. ದೇಶ ವಿದೇಶಗಳ ಸಸ್ಯತಜ್ಞರು ವಿದ್ಯಾರ್ಥಿಗಳು ಸೋನ್ಸ್ ಫಾರ್ಮಿಗೆ ಭೇಟಿ ನೀಡುತ್ತಾರೆ.

ಪರಿಸರ ತಜ್ಞ, ಪದ್ಮಭೂಷಣ ಸುಂದರಲಾಲ ಬಹುಗುಣ ಕೆಲ ವರ್ಷಗಳ ಹಿಂದೆ ಸೋನ್ಸ್ ಫಾರ್ಮಿಗೆ ಭೇಟಿ ನೀಡಿದ್ದರು. ಫಾರ್ಮಿನಲ್ಲಿನ ವಿವಿಧ ಬಗೆಯ ಬಿದಿರು ಮೆಳೆಗಳನ್ನು, ನೂರಾರು ಬಗೆಯ ಸಸ್ಯ ಸಂಕುಲಗಳನ್ನು ಕಂಡು ಹರ್ಷಗೊಂಡು ಡಾ. ಸೋನ್ಸ್‌ರಿಗೆ 'ನೀವು ಸಮೃದ್ಧಿಯನ್ನು ಬೆಳೆಸುತ್ತಿದ್ದೀರಿ. ಅದ್ಭುತ ಕಾರ್ಯವಿದು. ಸಂತುಷ್ಟ, ಸಂತೋಷ, ಆರೋಗ್ಯ ನಿಮ್ಮದಾಗಲಿ' ಎಂದು ಹಾರೈಸಿದ್ದರು.

ಸೋನ್ಸ್ ಫಾರ್ಮಿನಲ್ಲಿ ನೀರನ್ನು ಪತ್ತೆ ಮಾಡುವ ಬಗೆ ಹಾಗೂ ಕೃಷಿ ಕುರಿತು ಗ್ರಾಮೀಣ ಪ್ರದೇಶದಲ್ಲಿರುವ ಜನರಿಗೆ ತರಬೇತಿ, ಉಪನ್ಯಾಸ ಇತ್ಯಾದಿ ಜನೋಪಯೋಗದ ಕಾರ್ಯಕ್ರಮಗಳು ನಡೆಯುತ್ತವೆ.

ಡಾ. ಶಿವರಾಮ ಕಾರಂತರು ಮುಖ್ಯ ಅತಿಥಿಯಾಗಿದ್ದ, ರೋಟರಿ ಕ್ಲಬ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್‌ನ ಸದಸ್ಯರಲ್ಲದೇ ಕಾರಂತರ ಅಭಿಮಾನಿಗಳು, ಭೂಗ್ರಹ ರಕ್ಷಣೆಯಲ್ಲಿ ಆಸಕ್ತ ನಾಗರಿಕರು ಪಾಲ್ಗೊಂಡಿದ್ದರು. ನಾನು ಈ ಹಿಂದೆ ಕಾರಂತರು ಮುಖ್ಯ ಅತಿಥಿಯಾಗಿ ಪಾಲ್ಗೊಂಡ ಕೆಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದೆ. ಸಭಿಕನಾಗಿ, ಪತ್ರಕರ್ತನಾಗಿ. ಆದರೆ ಕಾರಂತರ ಪಕ್ಕದಲ್ಲಿ ಆಸೀನನಾಗಿದ್ದು ಎಂದಿಗೂ ಮರೆಯಲಾಗದ್ದು; ಅತ್ಯಂತ ಸ್ಮರಣೀಯವಾದುದು. ■